

ಕೆಲವೆಡೆ ಸೆಂಚುರಿ ತಲುಪಿದ ದರ | ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ

ಮಳೆಯಿಂದಾಗಿ ಟೊಮೇಟೊ ತುಟ್ಟಿ

■ **ವಿಕ ಸುದ್ದಿಲೋಕ** ಬೆಂಗಳೂರು

ಟೊಮೇಟೊ ದರ ಗಗನಕ್ಕೇರಿದ್ದು, ಕೆಲವೆಡೆ ಸೆಂಚುರಿ ತಲುಪಿದೆ. ಕಳೆದ ಎರಡು ವಾರದಿಂದಲೂ ರಾಜ್ಯಾದ್ಯಂತ ನಿರಂತರವಾಗಿ ಮಳೆ ಸುರಿಯುತ್ತಿದೆ. ಹೀಗಾಗಿ, ನವರಾತ್ರಿ ಹಬ್ಬ ಆರಂಭಕ್ಕೂ ಮೊದಲೇ ಟೊಮೇಟೊ ದರ ಏರಿಕೆಯ ಬಿಸಿ ಗ್ರಾಹಕರಿಗೆ ತಟ್ಟಿದೆ.

ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಸಾಧಾರಣ ಟೊಮೇಟೊ ಕೆ.ಜಿ.ಗೆ 50-60 ರೂ. ಇದ್ದರೆ, ಕೆಲವು ಬಡಾವಣೆಗಳಲ್ಲಿ ಗುಣಮಟ್ಟದ ಟೊಮೇಟೊ ಕೆ.ಜಿ.ಗೆ 100 ರೂ. ತಲುಪಿದೆ. ಅಷ್ಟೇ ಅಲ್ಲ, ಕೆಲವು ಕಡೆ ಮಾರುಕಟ್ಟೆಯಲ್ಲಿ ಉತ್ತಮ ದರ್ಜೆಯ ಹಣ್ಣು ಕೂಡ ಲಭ್ಯವಿಲ್ಲ. ಹಾಪ್‌ಕಾಮ್ಸ್‌ನಲ್ಲಿ 62 ರೂ. ಇದ್ದರೆ, ಕಲಾಸಿಪಾಳ್ಯ ಸಗಟು ತರಕಾರಿ ಮಾರುಕಟ್ಟೆಯಲ್ಲಿ ಕೆ.ಜಿ.ಗೆ 47-48 ರೂ. ಇದೆ.

ಕಳೆದ ಒಂದು ವಾರದ ಹಿಂದೆ ಕೆ.ಜಿ. ಟೊಮೇಟೊ ಕೇವಲ 15-20 ರೂ. ಇತ್ತು. ಇದೀಗ ದಿಢೀರ್ ಏರಿಕೆಯಾಗಿದೆ. ಕೋಲಾರ, ಹೊಸಕೋಟೆ, ಚಿಕ್ಕಬಳ್ಳಾಪುರ ಮತ್ತಿತರ ಭಾಗಗಳಲ್ಲಿ ಮಳೆಯಿಂದಾಗಿ ಟೊಮೇಟೊ ಬೆಳೆ ಹಾಳಾಗಿದೆ. ಹಣ್ಣು ಗಿಡದಿಂದ ಉದುರಿ ಕೊಳೆಯಲಾರಂಭಿಸಿದರೆ, ಕೆಲವೆಡೆ ಗಿಡಗಳೇ ನೆಲಕ್ಕುರುಳಿವೆ. ಇದೀಗ ನವರಾತ್ರಿ ಹಬ್ಬದ ಹಿನ್ನೆಲೆಯಲ್ಲಿ ಮದುವೆ, ಗೃಹಪ್ರವೇಶದಂತಹ ಸಮಾರಂಭಗಳು ಹೆಚ್ಚಾಗಿ ನಡೆಯುತ್ತಿವೆ. ಕೆಲವು ದೇವಾಲಯಗಳಲ್ಲಿ ಕೂಡ ಅನ್ನಸಂತರ್ಪಣೆ ನಡೆಯುತ್ತಿದೆ. ಹೋಟೆಲ್‌ಗಳಲ್ಲಿ ಕೂಡ ಟೊಮೇಟೊಗೆ ಬೇಡಿಕೆಯಿದೆ. ಆದರೆ ಉತ್ಪಾದನೆ ಕುಂಠಿತಗೊಂಡಿದ್ದು, ಬೇಡಿಕೆಗೆ ತಕ್ಕಂತೆ ಪೂರೈಕೆಯಿಲ್ಲದೆ ಬೆಲೆಗಳು ಏರಿಕೆಯಾಗಿವೆ. ಈಗಾಗಲೇ ಮಳೆಯಿಂದ ಬೆಳೆ ಹಾಳಾಗಿದೆ. ಇನ್ನೂ ಹೀಗೆಯೇ ಮಳೆ ಬಿದ್ದರೆ ಬೆಳೆ ಮತ್ತಷ್ಟು ಹಾಳಾಗುತ್ತದೆ ಎನ್ನುತ್ತಾರೆ ಮಾರಾಟಗಾರರು.

ಕೊತ್ತಂಬರಿ ಸೊಪ್ಪಿನ ಬೆಲೆಯೂ ದುಬಾರಿ

ಕೊತ್ತಂಬರಿ ಸೊಪ್ಪಿನ ಬೆಳೆಯೂ ಮಳೆಯಿಂದಾಗಿ ಕೊಳೆಯಲಾರಂಭಿಸಿದೆ. ಹೀಗಾಗಿ ಇದರ ಬೆಲೆಯೂ ಏರಿಕೆಯಾಗಿದ್ದು, ಒಂದು ಕಂತೆ ಸೊಪ್ಪಿಗೆ 40-50 ರೂ. ಇದೆ. ಕಳೆದ ವಾರ ಈ ಸೊಪ್ಪು ಕಂತೆಗೆ 20-30 ರೂ. ಮಿತಿಯಲ್ಲಿತ್ತು. ಇದೀಗ ಏರಿಕೆಯಾಗಿದೆ. ಬೀನ್ಸ್ ದರ ಸ್ವಲ್ಪ ಇಳಿಕೆಯಾಗಿದೆ. ಕೆ.ಜಿ.ಗೆ 40-50 ರೂ. ಇದೆ. ಕ್ಯಾರಟ್ ಮಾತ್ರ 70 ರೂ. ಇದೆ. ಮೆಂತ್ಯ ಸೊಪ್ಪು ಕಂತೆಗೆ 30 ರೂ., ಸಬ್ಬಸಿಗೆ ಸೊಪ್ಪು 30 ರೂ. ಪಾಲಕ್ ಸೊಪ್ಪು 25 ರೂ. ದರವಿದೆ.

ಟೊಮೇಟೊ	ದರ
ಚಿಲ್ಲರೆ ದರ	50-100 ರೂ.
ಹಾಪ್‌ಕಾಮ್ಸ್	62 ರೂ.
ಸಗಟು ದರ	47-48 ರೂ.

09-10-2021 Vk Pg 14

ಹಸಿರು ಉಸಿರು

ಗರುಡ ಫಲ

ಯುಫೋರ್ಬಿಯೇಸೀ ಕುಟುಂಬಕ್ಕೆ ಸೇರಿದ ಹಿಡ್ನೊಕಾರ್ಪಸ್ ಲಾರಿಫೋಲಿಯ ಎಂಬ ಶಾಸ್ತ್ರೀಯ ಹೆಸರಿನ ಮರ. ಚಿಕ್ಕ ಸುರಟೆ ಗಿಡ ಪರ್ಯಾಯ ನಾಮ. ಇಂಡೊ ಮಲಯ ಮತ್ತು ಫಿಷ್ಯದ ಉಷ್ಣ ಪ್ರದೇಶಗಳಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಭಾರತದಲ್ಲಿ ಪಶ್ಚಿಮ ಘಟ್ಟದ ಕಾಡುಗಳಲ್ಲೂ ವಿಪುಲ.

ಸುಮಾರು 50 ಮೀ ಎತ್ತರಕ್ಕೆ ಬೆಳೆಯುವ ಮರ ಇದು. ಕಂದು ಬಣ್ಣದ ತೊಗಟೆ, ಗರಗಸದಂಥ ಅಂಚುಳ್ಳ ನೀಳವಾದ ಎಲೆಗಳು, ಹಸುರು ಮಿಶ್ರಿತ ಬಿಳಿಬಣ್ಣದ ಚಿಕ್ಕ ಗಾತ್ರದ ಹೂಗಳು ಇರುತ್ತವೆ. ಒಂದು ವಿಶೇಷ ಬಗೆಯ ಎಣ್ಣೆಗೆ ಇದಕ್ಕೆ ಹಿಡ್ನೊಕಾರ್ಪಸ್ ತೈಲ ಎಂದು ಹೆಸರು. ಇದು ಅನೇಕ ತರದ ಚರ್ಮವ್ಯಾಧಿಗಳಿಗೆ, ಕುಷ್ಠರೋಗಕ್ಕೆ ಒಳ್ಳೆಯ ಮದ್ದು ಎನಿಸಿದೆ. ಎಣ್ಣೆಗೆ ಬೆಲ್ಜಿಯಂ, ಫ್ರಾನ್ಸ್, ಬೋರ್ನಿಯೊಗಳಲ್ಲಿ ಅತೀವ ಬೇಡಿಕೆಯಿದೆ.ಗರುಡ ಫಲಗಳನ್ನು ಗುಡ್ಡಪ್ರದೇಶಗಳಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಬೆಳೆಸುವುದು ರೂಢಿ. ಸಸ್ಯಾಭಿವೃದ್ಧಿ ಬೀಜಗಳ ಮೂಲಕ. ಮೊದಲು ನರ್ಸರಿಯಲ್ಲಿ ಸಸಿಗಳನ್ನು ಬೆಳೆಸಿ ಅನಂತರ ಅಪೇಕ್ಷಿತ ಸ್ಥಳಗಳಲ್ಲಿ ಸಸಿಗಳನ್ನು ನಾಟಿ ಮಾಡಲಾಗುತ್ತದೆ.

■ ಹನುಮಂತ.ಮ.ದೇಶಕುಲಕರ್ಣಿ.

09-10-2021Sk Pg 08

For more information visit
University Library Website
Web - uasbagrilibindia.org
E-mail- librarian@uasbangalore.edu.in